ಅಂತಿಮ ಗಡುವೆಂಬುದು ಇದ್ದೇ ಇದೆ –ಜಾತಸ್ಯ ಮರಣಂ ಧ್ರುವಂ. ಆಗ ಮತ್ತೆ ಸೈಕಲ್ಲುಗಳು ಶುರುವಾಗುತ್ತವೆ. ಬಡವರು ಸಿರಿವಂತರು ಎನ್ನದೆ ಅದು ಸಮಸ್ತರ ಸಂಗಾತಿಯಾಗುತ್ತದೆ. ಗಾಳಿಗೊಂದು ಪಂಪು, ತುಳಿಯಲೆರಡು ಕೈಕಾಲಿದ್ದರೆ, ಆಚಂದ್ರತಾರಕ ಬದುಕಬಲ್ಲ ಸರಳ ಜೀವಿಯಿದು. ಅದರ ಎರಡು ಚಕ್ರಗಳು ಸತಿಪತಿಯೊಂದಾಗಿ ಹಿತವಪ್ಪ ಸಂಸಾರದಂತಿವೆ. ಅದರ ಬಿಡಿಭಾಗಗಳಲ್ಲಿ ಎದ್ದುಕಾಣುವ ಸೀಟು–ಚಕ್ರ–ಚೈನುಗಳಿರಲಿ, ಹವೆ ತುಂಬಲು ನೆರವಾಗುವ ಹಿತ್ತಾಳೆ ತಿರುಪಿಗೆ ಕರುಳಿನ ತುಂಡು ಲಗತ್ತಿಸಿದಂತಿರುವ ವಾಲ್‌ಟ್ಯೂಬ್ ಕೂಡ ಮುಖ್ಯ. 'ಇಲ್ಲಿ ಯಾರೂ ಅಮುಖ್ಯರಲ್ಲ.' ತನ್ನ ವಿನ್ಯಾಸದಲ್ಲೇ ಬೆಟ್ಟದಡಿ ಹುಲ್ಲಾಗುವ, ಮನೆಗೆ ಮಲ್ಲಿಗೆಯಾಗುವ, ಬದುಕು ಕಷ್ಟಗಳ ಸುರಿಸುವಾಗ ಕಲ್ಲಾಗುವ ಗುಣಗಳು ಸೈಕಲ್ಲಿಗಿವೆ.

ತಾರುಣ್ಯಕ್ಕೆ ಕಾಲಿಡುತ್ತಿರುವವರು ಬಗೆಬಗೆಯ ಸೈಕಲುಗಳ ಮೇಲೆ ಕೂತು ಖಗಗಳಂತೆ ಹಾರಿ ಹೋಗುವುದನ್ನು ನೋಡುವಾಗ, ಹೊಸಸೈಕಲ್ ಕೊಳ್ಳುವ ಆಸೆಯಾಗುತ್ತದೆ. ಊರಹೊರಗೆ ಗದ್ದೆಹೊಲಗಳ ರಸ್ತೆಯಲ್ಲಿ ಹೋಗಿ ಚಿಲಿಪಿಲಿ ಸಂಗೀತ ಕೇಳಿಸಿಕೊಳ್ಳಬೇಕು; ಮುಪ್ಪಿಗೆ ಹೊರಳಲಿರುವ ಹೆಂಡತಿಯನ್ನು ಬಾರಿನ ಮೇಲೆ ಕೂರಿಸಿಕೊಂಡು 'ನನಗಿನ್ನೂ ಕಸುವಿದೆ' ಎಂದು ಸಾಬೀತುಪಡಿಸಬೇಕು; ಸಾಧ್ಯವಾದರೆ ಊರು – ಮನೆ ಬಿಟ್ಟು ದೂರ ಹೋಗಬೇಕು ಎಂದೆಲ್ಲ ಆಲೋಚನೆ ಹುಟ್ಟುತ್ತದೆ.

ಯಾಕಾಗಬಾರದು? ಸೈಕಲ್ ಎಂದರೆ ಆವರ್ತನ, ಋತುಗಳು ಮರಳಿ ಬರುವುದು ಎಂಬರ್ಥವೂ ಇದೆಯಷ್ಟೇ? ಮುಪ್ಪೆಂದರೆ ಮರಳಿ ಬಾಲ್ಯಕ್ಕೆ ಹೋಗುವುದು ಕೂಡ. ಕಳೆದುಹೋದ ಕಾಲವನ್ನು ಮರಳಿ ಕೊಡಿಸಲಾರದ ವೃದ್ಧಾಪ್ಯಕ್ಕೆ ಕಿಮ್ಮತ್ತಾದರೂ ಏನು? ಯಯಾತಿಗೆ ಅವನ ಮಗ ಕೆಲವು ಕಾಲ ತನ್ನ ಯೌವನವನ್ನು ಕಡವಾಗಿ ಕೊಟ್ಟಿದ್ದನು. ಹಾಗೆ ಸೈಕಲ್ ಕಳೆದುಹೋದ ಯೌವನವನ್ನು ಹಾಗೆ ಮರಳಿಸಲಾರದೇ? ಅಟ್ಟದಲ್ಲಿ ನಿಂತು ಹಳತಾಗಿದ್ದ ಸೈಕಲ್ಲು ಯಮುನಮ್ಮನ ಮಗನ ಕೈಯಲ್ಲಿ ಹೊಚ್ಚಹೊಸ ಬದುಕನ್ನು ಕಂಡಿತಲ್ಲ. ದಣಿದಂತೆ ತೋರುತ್ತಿರುವ ನನ್ನ ಜೀವಕ್ಕೆ ಹೊಸಚೈತನ್ಯ ನೀಡಲು ಸಖನಂತೆ ಗುರುವಂತೆ, ನಲ್ಲೆಯಂತೆ ಆಗಮಿಸಿ ಅದು ಕೈಹಿಡಿಯಬಲ್ಲುದೇ? ಸ್ಪಷ್ಟ ಉತ್ತರ ತಿಳಿಯದು. ಆದರೆ, 'ಇರುವುದೆಲ್ಲವ ಬಿಟ್ಟು ಇರುದುದೆಡೆಗೆ ಮನ' ತುಡಿಯುತಿರುವುದು ಮಾತ್ರ ನಿಜ.

## ರಹಮತ್ ತರೀಕೆರೆ

ಕನ್ನಡದ ಪ್ರಮುಖ ಲೇಖಕ ರಹಮತ್ ಚಿಕ್ಕಮಗಳೂರು ಜಿಲ್ಲೆಯ ತರೀಕೆರೆಯವರು. ಸಾಹಿತ್ಯ ವಿಮರ್ಶೆ, ಸಂಶೋಧನೆ, ಪ್ರವಾಸ ಕಥನ, ವಿಚಾರ ಸಾಹಿತ್ಯ, ಜೀವನ ಚರಿತ್ರೆ, ಸಾಹಿತ್ಯ ಮೀಮಾಂಸೆ ಪ್ರಕಾರಗಳಲ್ಲಿ ಪುಸ್ತಕಗಳನ್ನು ಬರೆದಿದ್ದಾರೆ. ನಾಡು ಸುತ್ತುವ ದಾಹ, ಮೋಹ ಇರುವ ಅವರ ಪ್ರಕಟಿತ ಪ್ರಮುಖ ಪುಸ್ತಕಗಳು: 'ಪ್ರತಿಸಂಸ್ಕೃತಿ', 'ಮರದೊಳಗಣ ಕಿಚ್ಚು', 'ಅಮೀರ್‌ಬಾಯಿ ಕರ್ನಾಟಕಿ', 'ನಡೆದಷ್ಟೂ ನಾಡು', 'ಕರ್ನಾಟಕದ ನಾಥ ಪಂಥ', 'ಕರ್ನಾಟಕದ ಸೂಫಿಗಳು' 'ಅಂಡಮಾನ್ ಕನಸು', 'ಕತ್ತಿಯಂಚಿನ ದಾರಿ', 'ಲೋಕವಿರೋಧಿಗಳ ಜೊತೆಯಲ್ಲಿ'. ರಹಮತ್, ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಸಾಹಿತ್ಯ ಅಧ್ಯಯನ ವಿಭಾಗದಲ್ಲಿ ಪ್ರಾಧ್ಯಾಪಕರು.